# ಶ್ರೀ ಶಾರದಾಮಹಾರಥೋತ್ಸವಾಹ್ವಾನಪತ್ರಿಕೆ

## 7. 2. 2015



मनः पूर्वकं ये रथं भूषयन्तीं गिरां देवि पश्यन्ति मोदादिह त्वाम् ।
मनः पूर्वकं ते रथं यत्नशून्याः द्रुतं प्राप्नुवन्त्येव कारुण्यपूर्णे ॥

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ, ಶೃಂಗೇರಿ

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ದಕ್ಷಿಣಾಮ್ನಾಯ ಶ್ರೀ ಶಾರದಾಪೀಠಂ, ಶೃಂಗೇರಿ

ಶ್ರೀಃ

ಮನಃ ಪೂರ್ವಕಂ ಯೇ ರಥಂ ಭೂಷಯಂತೀಂ
ಗಿರಾಂ ದೇವಿ ಪಶ್ಯಂತಿ ಮೋದಾದಿಹ ತ್ವಾಮ್ ।
ಮನಃ ಪೂರ್ವಕಂ ತೇ ರಥಂ ಯತ್ನಶೂನ್ಯಾಃ
ದ್ರುತಂ ಪ್ರಾಪ್ನುವಂತ್ಯೇವ ಕಾರುಣ್ಯಪೂರ್ಣೇ ॥

# ಶ್ರೀ ಶಾರದಾಮಹಾರಥೋತ್ಸವಾಹ್ವಾನಪತ್ರಿಕೆ

ಶೃಂಗೇರಿ ಜಗದ್ಗುರು ಮಹಾಸಂಸ್ಥಾನದಲ್ಲಿ ಆರಾಧ್ಯದೇವತೆಯಾದ ಶ್ರೀ ಶಾರದಾಮ್ಮನವರಿಗೆ ನಡೆಯತಕ್ಕ ಉತ್ಸವಗಳಲ್ಲಿ ಮಹಾರಥೋತ್ಸವವು ಅತ್ಯಂತ ಮಹತ್ವದ್ದಾಗಿರುತ್ತದೆ. ಅನೇಕ ಶತಮಾನಗಳಿಂದ ತಪ್ಪದೇ ನಡೆಯುತ್ತಿರುವ ಈ ಉತ್ಸವವನ್ನು ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಬಹಳ ವೈಭವದಿಂದ ನಡೆಸುತ್ತಿರುವುದು ಸರ್ವವಿದಿತವಾಗಿದೆ. ಪ್ರತಿವರ್ಷವೂ ಮಾಘ ಕೃಷ್ಣ ತದಿಗೆಯಂದು ಈ ಉತ್ಸವವು ನಡೆಯುತ್ತಿದ್ದು ಭಕ್ತ ಜನರಿಗೆ ಅತೀವ ಮೋದದಾಯಕವಾಗಿರುತ್ತದೆ. ಪಂಚಾಹ್ನಿಕದೀಕ್ಷೆಯಿಂದ ಆಗಮೋಕ್ತ ವಿಧಾನದಂತೆ ನಡೆಯುವ ಈ ಉತ್ಸವವು ಇದೇ ಶ್ರೀ ಜಯ ಸಂವತ್ಸರ ಮಾಘ ಕೃಷ್ಣ ಪ್ರತಿಪದಾರಭ್ಯ ಚತುರ್ಥಿ ಪರ್ಯಂತ (ದಿನಾಂಕ 03.02.2015 ರಿಂದ 09.02.2015 ರವರೆಗೆ) ಕೆಳಕಂಡ ಕಾರ್ಯಕ್ರಮದಂತೆ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದಿಂದ ನಡೆಯಲಿದೆ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆದೇಶದಂತೆ ಈ ಸಂದರ್ಭದಲ್ಲಿ ಲೋಕಕ್ಷೇಮಕ್ಕಾಗಿ ಶತಚಂಡೀ ಮಹಾಯಾಗವನ್ನು ನಡೆಸಲು ಏರ್ಪಾಟಾಗಿದೆ. ಸಕಲ ಆಸ್ತಿಕ ಭಕ್ತವರೇಣ್ಯರು ಸುಕೃತೈಕಲಭ್ಯವಾದ ಈ ಮಹೋತ್ಸವದಲ್ಲಿ ಭಾಗವಹಿಸಿ ಶ್ರೀ ಶಾರದಾಮ್ಮನವರ ಹಾಗೂ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಪರಿಪೂರ್ಣಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

ಇಂತು
ಗುರುಸೇವಾಧುರೀಣ
ಪದ್ಮಶ್ರೀ ಡಾ. ವಿ.ಆರ್. ಗೌರೀಶಂಕರ್

ಶೃಂಗೇರಿ
28.1.2015

# ಕಾರ್ಯಕ್ರಮಗಳು

ಮಾಘ ಶುಕ್ಲ ಪೂರ್ಣಿಮೆ– ಮಂಗಳವಾರ ದಿನಾಂಕ 3.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಶ್ರೀಶಕ್ತಿಗಣಪತಿ ಸನ್ನಿಧಿಯಲ್ಲಿ ಗಣಪತಿ ಪೂಜೆ, ಪ್ರಾರ್ಥನೆ.

ಮಾಘ ಕೃಷ್ಣ ಪ್ರತಿಪತ್– ಬುಧವಾರ 4.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಗುರುಹೊರೆಯಲ್ಲಿ 10.30 ಘಂಟೆ ಧ್ವಜಾರೋಹಣ, ಜಪ ಮತ್ತು ಪಾರಾಯಣ ಪ್ರಾರಂಭ. ಶ್ರೀ ಶತಚಂಡೀ ಮಹಾಯಾಗದ ಪ್ರಯುಕ್ತ ಸಹಸ್ರಮೋದಕ ಹೋಮ ನಂತರ ಯಾಗಶಾಲಾ ಪ್ರವೇಶ.

ಮಾಘಕೃಷ್ಣ ದ್ವಿತೀಯಾ – ಗುರುವಾರ 5.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಶ್ರೀ ಬ್ರಹ್ಮ ದೇವರಲ್ಲಿ ವಿಶೇಷ ಪೂಜೆ ಮತ್ತು ಮಂಗಳಾರತಿ ಬ್ರಹ್ಮಸಂತರ್ಪಣೆ. ಸಂಜೆ – ಶ್ರೀ ಶಾರದಾಮ್ಮನವರ ಬೀದಿ ಉತ್ಸವ.

ಮಾಘಕೃಷ್ಣ ತೃತೀಯಾ – ಶುಕ್ರವಾರ 6.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಬೆಳಿಗ್ಗೆ ಶ್ರೀ ಭವಾನೀ ಅಮ್ಮನವರು, ಶ್ರೀ ಶಾರದಾಮ್ಮನವರ ಸನ್ನಿಧಿಗೆ ಉತ್ಸವದಲ್ಲಿ ಚಿತ್ತೈಸುತ್ತಾರೆ. ನಂತರ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಮೃತಹಸ್ತದಿಂದ ಶ್ರೀ ಶಾರದಾಮ್ಮನವರಿಗೆ ವಿಶೇಷ ಪೂಜೆ ಮಹಾಮಂಗಳಾರತಿ 9 ಜನ ಸುವಾಸಿನೀ ಪೂಜೆ ಮತ್ತು ಸಂತರ್ಪಣೆ. ಸಂಜೆ– ಶ್ರೀ ಶಾರದಾಮ್ಮನವರ ಬೀದಿ ಉತ್ಸವ.

ಮಾಘಕೃಷ್ಣ ಚತುರ್ಥಿ–ಶನಿವಾರ 7.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಬೆಳಿಗ್ಗೆ 11.00ಕ್ಕೆ ಶುಕ್ರಹೊರೆಯಲ್ಲಿ ಉಭಯ ಶ್ರೀ ಶ್ರೀ ಗಳವರ ಉಪಸ್ಥಿತಿಯಲ್ಲಿ ಶ್ರೀಶಾರದಾಂಬಾ ಮಹಾರಥೋತ್ಸವ.

ಮಾಘಕೃಷ್ಣ ಪಂಚಮಿ –ಭಾನುವಾರ 8.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಓಕಳಿ ಉತ್ಸವ ನಂತರ ಶತಚಂಡೀ ಮಹಾಯಾಗದ ಪೂರ್ಣಾಹುತಿ. ಸಂಜೆ ತೆಪ್ಪೋತ್ಸವ ನಂತರ ಬೀದಿ ಉತ್ಸವ ಹಾಗು ಧ್ವಜಾಅವರೋಹಣ.

ಮಾಘಕೃಷ್ಣ ಷಷ್ಠಿ –ಸೋಮವಾರ 9.02.2015

ಶ್ರೀ ಶಾರದಾಮ್ಮನವರ ರಥೋತ್ಸವದ ಸಂಬಂಧ ಮಹಾ ಸಂಪ್ರೋಕ್ಷಣೆ.



*Printed at Vidya Bharathi Press, Bengaluru-560004*
*(An in-house publication wing of Sri Sringeri Mutt)*